ಅವರ ಮುಂದಿಟ್ಟೆ. ಯಾರೊಬ್ಬರೂ ನನ್ನನ್ನು ನಂಬಲಿಲ್ಲ – ನನ್ನ ತಂದೆಯ ಹೊರತಾಗಿ. ನನ್ನ ತಂದೆ ಅದನ್ನು ನಂಬಿದರು ಮತ್ತು ಮುಂದೆಂದೂ ಆ ವಿಷಯದ ಪ್ರಸ್ತಾಪ ಕೂಡ ಮಾಡಲಿಲ್ಲ. ಹೀಗಾಗಿ ನನ್ನ ಸ್ವಅನುಭವ ಪಡೆಯುವ ಕೆಲಸಕ್ಕೆ ಹಿನ್ನಡೆಯಾದರೂ ಸಹಜವಾಗಿಯೇ ಬದುಕಿನಲ್ಲಿ ನನಗೆ ವೈಯುಕ್ತಿಕವಾಗಿ ಮತ್ತು ಸಾರ್ವಜನಿಕವಾಗಿ ಅಪಾರ ಅವಕಾಶಗಳು ತೆರೆದುಕೊಂಡವು ಮತ್ತು ಅನುಭವದ ಅಕ್ಷಯ ಪಾತ್ರೆ ನನ್ನ ಪಾಲಿಗೆ ದಕ್ಕಿತು. ಪ್ರಯೋಗಶೀಲತೆ ನನ್ನ ಹುಟ್ಟುಗುಣ.

ನನ್ನ ವೈಯುಕ್ತಿಕ ಬದುಕಿನ ಸಲಹೆಗಾರರಾಗಿ ನನ್ನ ತಂದೆ ಇದ್ದರು. ಎತ್ತರವಾದ ಗರುಡಗಂಬ ದಂತಹ ವ್ಯಕ್ತಿತ್ವ ಅವರದಾಗಿತ್ತು. ಆಕಾಶ ನೀಲಿಯಂತಹ ಅವರ ಕಣ್ಣುಗಳಲ್ಲಿ ಮೊರೆಯುವ ಸಮುದ್ರದಂತಹ ಪ್ರೀತಿ, ತಾಯಿ ಗುಬ್ಬಚ್ಚಿಯು ಗುಟುಕು ನೀಡುವಂತಹ ಮಾತೃತ್ವ ಮತ್ತು ಅಚಲವಾದ ಬಂಡೆಯಂತಹ ನಂಬಿಕೆ ಮತು ಭರವಸೆ ನನ್ನ ಮೇಲಿತ್ತು. ಇಡೀ ನನ್ನ ಕುಟುಂಬದಲ್ಲಿ ಬರವಣಿಗೆಯತ್ತ ಆಕರ್ಷಿತಳಾದ ಮೊದಲ ತಲೆಮಾರಿನ ಮೊದಲ ವ್ಯಕ್ತಿಒಬ್ಬ ಹೆಂಗಸು ನಾನಾಗಿದ್ದೆ. ಮುಸ್ಲಿಂ ಹೆಣ್ಣು ಮಗಳೊಬ್ಬಳನ್ನು ಪಳಗಿಸಿ ಸಂಸಾರ ಯೋಗ್ಯಳನ್ನಾಗಿ ಮಾಡುವ ಪ್ರಕ್ರಿಯೆಯಲ್ಲಿ ನನ್ನ ಕುಟುಂಬ ಮಾತ್ರವಲ್ಲದೇ ಇಡೀ ವಂಶವೇ ತೊಡಗಿತ್ತು. ಮೊಟ್ಟಮೊದಲಿಗೆ ಕನ್ನಡದಲ್ಲಿ ವಿದ್ಯಾಭ್ಯಾಸ ಪಡೆದವಳಾಗಿದ್ದರಿಂದ ಮತ್ತು ಸ್ವತಃ ಅಂಕುಶಗಳಿಗೆ ಬೆದರದೆ ಸ್ವತಂತ್ರ ಪ್ರವೃತ್ತಿಯನ್ನು ಹೊಂದಿದ್ದ ನನ್ನ ಬಗ್ಗೆ ಎಲ್ಲರಿಗೂ ಅಪಾರ ಅನುಮಾನಗಳಿದ್ದವು. ಎಲ್ಲರೂ ವಿಶೇಷ ಪ್ರಯತ್ನಗಳನ್ನು ಮಾಡಿ, ನನ್ನನ್ನು ಸರಪಳಿಗಳಲ್ಲಿ ಬಂಧಿಸಲಾಗದೆ ನಿರಾಶರಾಗಿ ಎಲ್ಲರು ಒಟ್ಟಾಗಿ ಸೇರಿ ಅವಳು 'ವಂಶಕ್ಕೆ ಕಳಂಕ ತರುತ್ತಾಳೆ' ಎಂಬ ಭವಿಷ್ಯವಾಣಿಗೆ ಅಂಟಿಕೊಂಡಿದ್ದರು. ಆದರೆ ಇಡೀ ಒಟ್ಟು ಕುಟುಂಬದಲ್ಲಿ ನನ್ನ ತಂದೆಗೆ ಅನಭಿಷಿಕ್ತ ದೊರೆಯ ಸ್ಥಾನಮಾನವಿತ್ತು ಮತ್ತು ನನ್ನ ತಂದೆಯು ಗಾಳಿಪಟದಂತೆ ನನ್ನನ್ನು ಅಗಸದೆತ್ತರಕ್ಕೆ ಏರಿಸಿದ್ದರು. ಅವರು ಹೇಳದಿದ್ದರೂ ನನಗನ್ನಿಸುತ್ತಿತ್ತು: ನಾನು ಮತ್ತು ಅವರು ಏಕಸೂತ್ರದಿಂದ ಬಂಧಿತರಾಗಿದ್ದೇವೆ. ಮತ್ತು ಆಗಸದ ಉದ್ದಗಲಕ್ಕೂ ಗಾಳಿಯನ್ನು ಸ್ಪರ್ಶಿಸುತ್ತ, ಸಂಘರ್ಷಿಸುತ್ತ ನಾನು ನನ್ನನ್ನೇ ಮೀರಬಹುದು. ನನ್ನ ತಂದೆಯ ಆ ಅಪಾರ ಪ್ರೀತಿ, ನಂಬಿಕೆ ಮತ್ತು ಭರವಸೆ ಹಾಗೂ 'ಯು ಆರ್ ಎ ಸ್ಪೇಷಲ್ ಲೇಡಿ' ಎಂಬ ಅಭಿಸಂಬೋಧನೆಯ ಬೆಳಕು ಭೂಮಂಡಲದಲ್ಲೇ ನನ್ನ ಮಗಳಂತಹ ಜಾಣೆ, ಬುದ್ಧಿವಂತೆ ಯಾರೂ ಇಲ್ಲ ಎಂಬ ನನ್ನ ತಂದೆಯ ಹೆಮ್ಮೆ ನನಗೆ ನೀಡಿದ್ದು ಅಗಾಧ ಆತ್ಮವಿಶ್ವಾಸವನ್ನು, ಯಾರನ್ನು ಮತ್ತು ಏನನ್ನು ಬೇಕಾದರೂ ಎದುರಿಸಬಲ್ಲ ಆತ್ಮಬಲವನ್ನು ಮತ್ತು ಕಣ್ಣಂಚು ಒದ್ದೆಯಾಗುವ ಜೀವನ ಪ್ರೀತಿಯನ್ನು. ವೈಯಕ್ತಿಕ ಬದುಕಿನಲ್ಲಿ ನನ್ನ ಬೆಳವಣಿಗೆಗೆ ಪೂರಕವಾದ ಸಕಾರಾತ್ಮಕವಾದ ವಾತಾವರಣವಿತ್ತು. ಆದರೆ ನನ್ನ ಬರವಣಿಗೆಯ ವಿಚಾರದಲ್ಲಿ ಕುಟುಂಬದ ಆಪ್ತರ ನೆರವು ಸಿಗುವ ಸಂಭವವಿರಲಿಲ್ಲ. ನನ್ನ ತಂದೆ ನನಗೆ ಅಪಾರ ಪುಸ್ತಕಗಳನ್ನು ತಂದುಕೊಡುತ್ತಿದ್ದರು, ಅವರಿಗೆ ಮೈತುಂಬ ಸಾಲಗಳಿದ್ದವು. ನನಗೆ ಪುಸ್ತಕಗಳನ್ನು ಹೊಂದಿಸುವ ಸಲುವಾಗಿಯೂ ಅವರು ಸಾಲ ಮಾಡುತ್ತಿದ್ದರು. ನಾನು ಪತ್ರಿಕೆಗಳನ್ನು ತುಂಬ ಓದುತ್ತಿದ್ದೆ. ಅದರಲ್ಲಿ ಯಾವುದಾದರೂ ಸ್ಪರ್ಧೆಗೆ ಕತೆಗಳನ್ನು ಆಹ್ವಾನಿಸಿದಾಗ ಹಾಳೆಯ ಒಂದು ಬದಿಗೆ ಮಾತ್ರ ಬರೆಯಿರಿ ಎಂಬ ಉಲ್ಲೇಖವಿರುತ್ತಿತ್ತು. ಅನೇಕ ವರ್ಷಗಳ ವರೆಗೆ ಅದೇನೆಂಬುದೇ ನನಗೆ ತಿಳಿಯಲಿಲ್ಲ. ಆ ವಿಚಾರ ನನಗೆ ಸ್ಪಷ್ಟವಾಗದೆ ಇದ್ದುದರಿಂದಲೇ ನನ್ನ ಅಷ್ಟಿಷ್ಟು ಬರವಣಿಗೆಯ ಹಾಳೆಗಳು ಎಲ್ಲೆಲ್ಲೋ ಹಾರಿ ಹೋಗಿವೆ. ಈ ಬಗ್ಗೆ ನನ್ನ ಕಾಲೇಜು ವ್ಯಾಸಂಗದ ಸಂದರ್ಭದಲ್ಲಿಯೂ ಯಾವುದೇ ಮಾರ್ಗದರ್ಶನ, ಸಲಹೆ, ಸೂಚನೆಗಳು ದೊರಕಲಿಲ್ಲ.